

# ಪ್ರಜಾಮತ



ಏಪ್ರಿಲ್ 26, 1992
ರೂ. 4-00

ಕನ್ನಡ ಸಾಹಿತಿಗಳು ಕಂಡ

# ನಟ ಸಾರ್ವಭೌಮ



...ಂದು, ಭಗವಾನ್, ಜೂನಿಯರ್ ನರಸಿಂಹರಾಜು

...ರಂಭಿಸಲಿ. ಇಂಗ್ಲೀಷ್
...ೋಗೋದು ಬೇಕಾಗಿಲ್ಲ ;
...ಡ ಮಾಧ್ಯಮದ ಶಾಲೆಗೆ
...ಜನ ಬಯಸುವಷ್ಟರ
ಅಚ್ಚುಕಟ್ಟಾಗಿರಬೇಕು.
...ಯಲ್ಲಿ ಒಂದೊಂದು
...ಾಕು, ರಾಜ್‌ಕುಮಾರ್‌ರ
ಉಳಿಯುವುದಲ್ಲದೆ,
...ತಹ ಕನ್ನಡ ಶಾಲೆಗೇ
...ದು ಜನಗಳಲ್ಲಿ ಆಸಕ್ತಿ
...ರು ಇನ್ನೂ ಗಟ್ಟಿಯಾಗಿ
...ವಾಗುತ್ತದೆ. ಆ ಕಡೆ
ಮಾಡುವುದು ಸೂಕ್ತ

ಶಾಲೆಗಳ ಮುಂದೆ
ಹೇಗೆ ಮಾಯವಾಗು
ಇಂಗ್ಲೀಷ್ ಶಾಲೆಗಳು
...ಗಳು ಉಳಿಯುವಂಥ
...ಾಧ್ಯಮದ ಉತ್ತಮ
...ನ್ಯ ಜನರಿಗೆ ಅನುಕೂಲ
... ತಮ್ಮ ಹೆಸರಿನಲ್ಲಿ
...ಮ್ಮ ಜನಕ್ಕೆ ಉಪಕಾರ
ಕನ್ನಡ ಕನ್ನಡ ಎಂದು
ಹೇಳುತ್ತಿದ್ದಾರೆ, ಆ
...,' ಎಲ್ಲ ಜನಕ್ಕೂ
...ುತ್ತದೆ ಎಂದು ನಾನು

## ಕರ್ನಾಟಕ ವಿಕಾಸ ವೇದಿಕೆ ಅಧ್ಯಕ್ಷ ಸಿದ್ದಯ್ಯ ಪುರಾಣಿಕ್

ನಟ ಸಾಮ್ರಾಟ ಡಾ॥ ರಾಜ್‌ಕುಮಾರ್ ಇಂದು ಭಾರತದಲ್ಲಿ ಬದುಕಿರುವ ಸರ್ವಶ್ರೇಷ್ಠ ನಟರಲ್ಲಿ ಒಬ್ಬರು. ಕನ್ನಡದಲ್ಲಿಯಂತೂ ಅವರು ಏಕಮೇವಾ ದ್ವಿತೀಯರು. ಅವರು ಅನೇಕ ಚಿತ್ರಗಳಲ್ಲಿ ಈ ನಾಡಿನ ಮಹಾಪುರುಷರ ಪಾತ್ರಗಳನ್ನು ವಹಿಸಿ, ಅವುಗಳಿಗೆ ಜೀವಕಳೆ ತುಂಬಿ, ಅವರ ವಿಚಾರಗಳನ್ನು ಜನಮನದಲ್ಲಿ ಬಿತ್ತಿ, ಕನ್ನಡ ಭಾಷೆಯ, ಸಾಹಿತ್ಯದ, ಸಂಸ್ಕೃತಿಯ ಸಿರಿವಂತಿಕೆ ಹೆಚ್ಚಲು ಕಾರಣರಾಗಿದ್ದಾರೆ.

ಅವರ ತಾಯ್ನುಡಿಯ, ತಾಯ್ನಾಡಿನ, ಅಭಿಮಾನ ಅನುಪಮವಾದುದು. ಗೋಕಾಕ್ ಚಳವಳಿ ಸಂದರ್ಭದಲ್ಲಿ ತಮ್ಮ ಎಲ್ಲ ಕೆಲಸ



ಗಳನ್ನೂ ಬದಿಗಿಟ್ಟು, ಬೆಂಗಳೂರಿನಿಂದ ಬಳ್ಳಾರಿ ಹಾಗೂ ಆಚೆವರೆಗೆ ಕನ್ನಡದ ಜನರನ್ನು ಜಾಗೃತಿಗೊಳಿಸುವಲ್ಲಿ ತಮ್ಮನ್ನು ತಾವು ಹೃತ್ಪೂರ್ವಕವಾಗಿ ತೊಡಗಿಸಿಕೊಂಡರು. ಗೋಕಾಕ್ ಚಳವಳಿಗೆ ಉಕ್ಕು ಬಂದದ್ದು ಅವರು ಅದರಲ್ಲಿ ಪ್ರವೇಶಿಸಿದ ಮೇಲೆಯೇ. ಇದು ನಿಸ್ಸಂದೇಹವಾದುದು. ಆಗ ಅವರಿಗಿದ್ದ ಜನ ಬೆಂಬಲವನ್ನು ನೋಡಿ ನಾವೆಲ್ಲರೂ ಬೆರಗಾದದ್ದುಂಟು. ಹಾಗೆಯೇ ಕನ್ನಡದ ಕರೆ ಬಂದಾಗಲೆಲ್ಲಾ ಅವರು ಓಗೊಟ್ಟಿದ್ದಾರೆ. ಟಿಪ್ಪು ಸುಲ್ತಾನನ ಖಡ್ಗವೇ ಇರಲಿ. ಅಥವಾ ಅಂತರರಾಷ್ಟ್ರೀಯ ಚಿತ್ರೋತ್ಸವವೇ ಇರಲಿ, ಬೇರೆ ಯಾವ ಸಂದರ್ಭವೇ ಇರಲಿ, ಕನ್ನಡಕ್ಕೆ ಧಕ್ಕೆ ಬಂದಾಗಲೆಲ್ಲಾ ಅವರು ಉಕ್ಕಿನ ನಿರ್ಧಾರದೊಡನೆ ಮುಂಚೂಣಿಯಲ್ಲಿದ್ದು ಹೋರಾಟ ಮಾಡಿದ್ದಾರೆ.

ಅವರ ಚಿತ್ರ ಜೀವನ ಒಂದು ದೃಷ್ಟಿಯಿಂದ ಕನ್ನಡಿಗರ ಸಾಂಸ್ಕೃತಿಕ ಬದುಕಿನ ಒಂದು ಅವಿಭಾಜ್ಯ ಅಂಗವಾಗಿಯೇ ಬೆಳೆದುಬಂದಿದೆ. ಅವರು ಕನ್ನಡ ಗೀತೆಗಳನ್ನು ಹಾಡಿದಾಗ, ಅವುಗಳಿಗೆ ಎಲ್ಲಿಲ್ಲದ ಕಸುವು, ಕಳೆ, ಕಾಂತಿ ಬರುತ್ತದೆ. ಅವರು ಸದ್ಗುಣಶಾಲಿಗಳೂ ಆಗಿರುವುದು ಬಂಗಾರಕ್ಕೆ ಕುಂದಣವನ್ನಿಟ್ಟಂತೆಯ, ಸುಗಂಧವನ್ನು ಸೇವಿಸಿದಂತೆ.

ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಬಹುದಾದ ಸಹಕಾರ ನನಗೆ ಹೀಗೆ ತೋರುತ್ತದೆ "ಕನ್ನಡದ ಅತ್ಯುತ್ಕೃಷ್ಟ ಗ್ರಂಥಗಳೂ ಸಹ ಒಂದು ಸಾವಿರ ಪ್ರತಿ ಬೇಗನೆ ಮಾರಾಟವಾಗುವುದಿಲ್ಲ. ಇವುಗಳಿಗೆ ನಮ್ಮ ರಾಜ್ಯದಲ್ಲಿ ಒಂದು ವಾಚನಾಲಯಗಳ ಜಾಲವೇ ಇಲ್ಲದಿರುವುದು ಕಾರಣ. ನಾನು ಅನೇಕ ಸಲ ಈ ಬಗ್ಗೆ ಮಾತನಾಡಿದ್ದೇನೆ. ಕನ್ನಡನಾಡಿನಲ್ಲಿ ಕನಿಷ್ಟ 5,000 ವಾಚನಾಲಯಗಳು ಸರ್ಕಾರದ ಸಹಾಯದಿಂದಲೂ, ಜಿಲ್ಲಾ ಪರಿಷತ್ತುಗಳ ಸಹಾಯದಿಂದಲೂ ಏರ್ಪಡಬೇಕು. ಅವುಗಳಿಗೆ ಸರ್ಕಾರ ಹಾಗೂ ಜಿಲ್ಲಾ ಪರಿಷತ್‌ಗಳು ಕೊಳ್ಳುವ ಕೃತಿಗಳ ಜೊತೆಗೆ ರಾಜ್‌ಕುಮಾರ್ ಅಂಥವರು ತಮಗೆ ಇಷ್ಟವಾದ ಒಂದು ಪುಸ್ತಕದ 5,000 ಪ್ರತಿಗಳನ್ನು ಕೊಂಡು ಆ 5,000 ವಾಚನಾಲಯಗಳಿಗೆ ಸರಬರಾಜು ಮಾಡಬಹುದು. ಇದರಿಂದ ಕನ್ನಡದ ಶ್ರೇಷ್ಠ ಸಾಹಿತ್ಯಕ್ಕೆ ಒಂದು ಬಹಳ ದೊಡ್ಡ ಬೆಂಬಲ ದೊರೆಯುತ್ತದೆ. ಅವರ ಹೆಸರಿನಲ್ಲಿ ಪುರಸ್ಕಾರವನ್ನು ಸಹ ಪ್ರಾರಂಭ ಮಾಡಬಹುದು. ಆ ಪುರಸ್ಕೃತ ಕೃತಿಯ 5,000 ಪ್ರತಿಗಳನ್ನು ನಂತರ ವಾಚನಾಲಯಗಳಿಗೆ ಹಂಚಬಹುದು.

ರಾಜ್‌ಕುಮಾರ್ ಹಾಗೂ ನನ್ನ ಸಂಪರ್ಕ ವಿರಳವಾದರೂ ಸಹ ಅತ್ಯಂತ ಮಹತ್ವಪೂರ್ಣವಾದದ್ದು. ಗೋಕಾಕ್ ಚಳವಳಿಯಲ್ಲಿ ಮಾತ್ರ ಅವರೊಡನೆ ನಿಕಟವಾದದ್ದುಂಟು. ಆನಂತರ ಅವರೇ ಕರೆದಂಥ ಸಭೆಯಲ್ಲಿ ಭಾಗವಹಿಸಿ ಕನ್ನಡಕ್ಕಾಗಿ ಅವರು ಕೈಗೊಳ್ಳಬಹುದಾದ ಕಾರ್ಯಗಳ ಬಗ್ಗೆ ಚರ್ಚಿಸಿದ್ದುಂಟು. ಹಾಗೂ ನನ್ನ "ಹೊತ್ತಿತೊ ಹೊತ್ತಿತೊ ಕನ್ನಡದ ದೀಪ" ಎಂಬ ಹಾಡನ್ನು ಅವರು ಧ್ವನಿ ಸುರುಳಿಗಾಗಿ ಆಯ್ದುಕೊಂಡಾಗಲೂ ನನಗೆ ಅವರ ಸಂಪರ್ಕ ಒದಗಿ ಬಂತು. ಸಂಪರ್ಕ ಒದಗಿದ ಸಂದರ್ಭಗಳೇನೇ ಇರಲಿ, ಅವುಗಳ ಸಂಖ್ಯೆ ಎಷ್ಟೇ ಇರಲಿ, ಒಟ್ಟಿನಲ್ಲಿ ಹೇಳುವುದಾದರೆ ನನ್ನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದಂಥ ಸಮಕಾಲೀನ ಕನ್ನಡ ಪುರುಷ ಶ್ರೇಷ್ಠರಲ್ಲಿ ಅವರೊಬ್ಬರು ಎಂಬ ಬಗ್ಗೆ ಎರಡು ಮಾತಿಲ್ಲ. ಸಾಹಿತ್ಯ ಲೋಕದಲ್ಲಿ ಕುವೆಂಪು, ಮಾಸ್ತಿ, ಬೇಂದ್ರೆ ಮೊದಲಾದವರ ಪ್ರಭಾವಕ್ಕೆ ಒಳಗಾಗಿರುವ ನಾನು ಕಲಾಲೋಕದಲ್ಲಿ ರಾಜ್‌ಕುಮಾರ್, ಮನ್ಸೂರ್ ಮೊದಲಾದವರ ಪ್ರಭಾವಕ್ಕೆ ಒಳಗಾಗಿದ್ದೇನೆ. ನನ್ನ ಅಂತರಂಗದ ಜೀವನವನ್ನು ಬೆಳಗಿದ ವ್ಯಕ್ತಿಗಳಲ್ಲಿ ಸಾಹಿತಿಗಳೂ ಇದ್ದಾರೆ, ಕಲಾವಿದರೂ ಇದ್ದಾರೆ ಮತ್ತು ಕೆಲವು ರಾಷ್ಟ್ರ ಮಟ್ಟದ ನಾಯಕರೂ ಇದ್ದಾರೆ. ಗಾಂಧೀಜಿ, ಜೆ. ಪಿ. ಯವರು ಇದ್ದಾರೆ. ಅವರೆಲ್ಲರ ಪ್ರಭಾವದ ಜೊತೆಗೆ ರಾಜ್‌ಕುಮಾರರು



"ಬಂಗಾರದ ಮನುಷ್ಯ"

ನನ್ನ ಮೇಲೆ ಬೀರಿದ ಪ್ರಭಾವವನ್ನು ನಾನು ಬಹಳ ಪ್ರೀತಿಯಿಂದ ಹೆಮ್ಮೆಯಿಂದ ಕಾಪಾಡಿಕೊಂಡು ಹೊರಟಿದ್ದೇನೆ. ರಾಜ್‌ಕುಮಾರರು ಬಯಸಲಿ ಬಯಸದಿರಲಿ ಕನ್ನಡದ ಒಂದು ಕೊನೆಯಹೋರಾಟವೇನಾದರೂ ಆರಂಭವಾದಲ್ಲಿ ಅವರು ಅದರಲ್ಲಿ ಯಾರೂ ಕರೆಯದೆ ಧುಮುಕುವರೆಂಬ ಬಗ್ಗೆ ನನಗೆ ಸಂಶಯವಿಲ್ಲ. ಅವರ ಹೆಸರಿನ ಬಲದಿಂದ ಅನೇಕ ಯುವಕರು ಉತ್ತೇಜನಗೊಂಡು ಕನ್ನಡದ ಕೆಲಸವನ್ನು ಮಾಡುತ್ತಾ ಇದ್ದಾರೆ. ಮುಂದೆ ಒಂದು ದಿನ ಅವರು ಕನ್ನಡದ ಪ್ರಮುಖ ನಾಯಕರಾಗಿ ಕನ್ನಡಕ್ಕೆ, ಕರ್ನಾಟಕಕ್ಕೆ, ಕನ್ನಡಿಗರಿಗೆ ಎಂದಿಲ್ಲದ ಬಲವನ್ನು ತಂದುಕೊಟ್ಟರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ಸಾಮಾನ್ಯವಾಗಿ ಕಲಾವಿದರ ಖಾಸಗಿ ಜೀವನದ ಬಗ್ಗೆ ಕೆಲವರಿಗೆ ಅನುಮಾನಗಳಿರುವುದು ಸಹಜ. ಈ ಯಾವ ಅನುಮಾನಕ್ಕೂ ಆಸ್ಪದವಿಲ್ಲದ ರೀತಿಯಲ್ಲಿ ಅವರು ಶುದ್ಧ ಜೀವನವನ್ನೇ ನಡೆಸಿಕೊಂಡು ಬಂದಿದ್ದಾರೆ. ಭಗವದ್‌ಭಕ್ತರಾಗಿ ಮುಂದುವರೆದಿದ್ದಾರೆ. ಅವರ ಮಾತಾ ಪಿತೃ ಪ್ರೇಮ ಅನುಕರಣೀಯವಾದುದೆಂದು ಹೇಳಬಲ್ಲೆ. ಗುರುಹಿರಿಯರಲ್ಲಿ ಭಕ್ತಿ. ಹುಟ್ಟಿದ ನಾಡಿನ ಬಗ್ಗೆ ಹೆಮ್ಮೆ. ತಾಯ್ನುಡಿಯ ಬಗ್ಗೆ ಕಳಕಳಿ ಹಾಗೂ ತಾವು ಕೈಗೊಂಡಿರುವ ಕಾಯಕದಲ್ಲಿ ಅಚಲವಾದ ಶ್ರದ್ಧೆ – ಇವುಗಳಿಂದ ಅವರು ಇಂದು ಕನ್ನಡ ನಾಡಿನ ಅತ್ಯಂತ ಜನಪ್ರಿಯರಷ್ಟೇ ಅಲ್ಲ, ಒಬ



ಆದರ್ಶ ವ್ಯಕ್ತಿಯಾಗಿ ಕೂಡ ಜನಮನದಲ್ಲಿ ಬೀಡುಬಿಟ್ಟಿದ್ದಾರೆ.

ಇವರು ಕನ್ನಡದ ಹೋರಾಟಕ್ಕೆ ಇಳಿದರೆ, ಆ ಹೋರಾಟಕ್ಕೆ ಸಾವಿರ ಆನೆಗಳ ಶಕ್ತಿ ಬರುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅವರಿನ್ನೂ ತಮ್ಮ ವಯೋಮಾನಕ್ಕೆ ತಕ್ಕಂಥ ಬೇರೆ ಬೇರೆ ಘನವಾದ ಪಾತ್ರಗಳನ್ನು ವಹಿಸಿ ಇನ್ನೂ ನಮ್ಮ ಚಿತ್ರ ಜಗತ್ತನ್ನು ಶ್ರೀಮಂತಗೊಳಿಸಬೇಕೆನ್ನುವವರೂ ಇದ್ದಾರೆ. ಇದು ಅವರ ವೈಯಕ್ತಿಕ ವಿವೇಚನೆಗೆ ಬಿಟ್ಟ ವಿಷಯ. ಒಬ್ಬ ಕನ್ನಡಿಗನಾಗಿ ಅವರೆಲ್ಲಿದ್ದರೂ ಇನ್ನೂ ಶ್ರೇಯಸ್ಸಿನ ಉನ್ನತ ಶಿಖರಕ್ಕೇರಲಿ, ಬಹುಕಾಲ ಬಾಳಲಿ, ಕನ್ನಡಿಗರ ಹೃನ್ಮನಗಳನ್ನು ತಣಿಸುತ್ತಾ, ಕನ್ನಡಕ್ಕಾಗಿ ಹೋರಾಡುತ್ತಾ, ಕನ್ನಡದ ಧ್ವಜವನ್ನು ಮೇಲಕ್ಕೆತ್ತಿ ಹಿಡಿಯುತ್ತಾ ಇರಲೆಂಬುದೇ ನನ್ನ ಹಾರೈಕೆ.

ಜನತೆಯ ಶಕ್ತಿ
ಸ್ಪಷ್ಟವಾದ ಜನ
ಇರಬೇಕು.
ಹೋರಾಟ ಮತ
ಒಟ್ಟಿಗೇ ಸೇರುವು

ಡಾ॥ ರಾಜ್ ಅ
ಸಹಕಾರಕ್ಕೆ ಸಿದ್ಧ
ಸುವುದು ಏನಿದೆ?
ಉತ್ತರವಲ್ಲ
ಹೇಗೆಂದು ಒಂದೇ
ಸಾಹಿತ್ಯದ ಪ್ರಕಟ
ಕಾರ್ಯಕ್ರಮಗಳಿಗೆ
ಸಹಕಾರಿಯಾಗುವು
ಹೇಗೆ ಸಹಕರಿಸಬೇ
ಅವರ ಬಿಡುವು, ಅ
ಕಾರ್ಯಕ್ರಮಗಳನ

ಡಾ॥ ರಾಜ್ ಅ
ಮತ್ತು ಅಭಿನಯ

ಕರ್ನಾಟಕ ಸಾಹಿತ್ಯ